# ಕಬ್ಬನ್‌ನಲ್ಲಿ ಕಾಷ್ಠ ಶಿಲ್ಪ

ಬೆಂಗಳೂರಿನ ಪ್ರಸಿದ್ಧ ಉದ್ಯಾನವನಗಳಲ್ಲಿ ಒಂದು ಕಬ್ಬನ್ ಉದ್ಯಾನವನ. ಇಲ್ಲಿ ಹತ್ತಾರು ಕಲಾವಿದರು ಸೇರಿ ಕಾಷ್ಠಶಿಲ್ಪಗಳಿಗೆ ಹೊಸ ರೂಪ ಕೊಟ್ಟಿದ್ದಾರೆ.

ಅದೊಮ್ಮೆ ನಡೆದ ಕಲಾಶಿಬಿರದಲ್ಲಿ ಗಾಳಿ ಮಳೆಯ ರಭಸಕ್ಕೆ ಮುರಿದುಬಿದ್ದ ಮರಗಳ ಮೇಲೆ ಕಲಾವಿದರು ತಮ್ಮ ಸೃಜನಶೀಲತೆಯನ್ನು ಧಾರೆ ಎರೆದರು.

ಬೆಂಗಳೂರಿನಲ್ಲಿ ಮಳೆಯ ರಭಸಕ್ಕೆ ಹಲವಾರು ಮರಗಳು ಧರೆಗೆ ಉರುಳುವುದು ಸಾಮಾನ್ಯ. ಅವು ಯಾರದೋ ಮನೆಯಲ್ಲಿ ಸೌದೆಯ ಕಟ್ಟಿಗೆಯಾಗಿ ಉರಿದು ಬೂದಿಯಾಗುವುದಿಲ್ಲ. ಅಲ್ಲಿಯೇ ಬಿದ್ದಿರುತ್ತವೆ. ಇಂತಹ ಒಣಮರಗಳಿಗೆ ಜೀವ ತುಂಬಿದರೆ ಹೇಗೆ.. ಎನ್ನುವ ಹೊಸ ಆಲೋಚನೆಯೇ ಈ ಕಲಾಶಿಬಿರದ ಮೂಲ ಕಲ್ಪನೆ.

ಗಾಳಿಗೆ ಬಿದ್ದ ಮರದ ರೆಂಬೆ, ಕೊಂಬೆಗಳಿಗೆ ಅರ್ಥಪೂರ್ಣ ರೂಪ ನೀಡಬೇಕೆಂಬ ಉದ್ದೇಶದಿಂದ ತೋಟಗಾರಿಕಾ ಇಲಾಖೆ, ಕರ್ನಾಟಕ ಶಿಲ್ಪಾಕಲಾ ಅಕಾಡೆಮಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಈ ಕಲಾಶಿಬಿರವನ್ನು ಆಯೋಜಿಸಿದ್ದವು. ಶಿಬಿರದಲ್ಲಿ ಭಿನ್ನ ವಿಭಿನ್ನ ಕಲಾಕೃತಿಗಳು ಸಾಕಾರಗೊಂಡವು. ಕಲಾವಿದರ ಕಲ್ಪನೆಯ ಮೂಸೆಯಲ್ಲಿ ವಿಭಿನ್ನ ಕಲಾಕೃತಿಗಳು ಅರಳಿದವು.

ಕಲಾ ಶಿಬಿರವು ಸುಮಾರು 15 ದಿನಗಳ ಕಾಲ ನಡೆಯಿತು. ಬೆಂಗಳೂರು, ಹಾಸನ, ಕೊಪ್ಪಳ, ಭದ್ರಾವತಿ ಮುಂತಾದೆಡೆಯಿಂದ ಬಂದ ಸುಮಾರು 15 ಮಂದಿ ಕಲಾವಿದರು, ನವ ಪರಿಕಲ್ಪನೆಯಲ್ಲಿ ಸುಂದರ ಕಲಾಕೃತಿಗಳನ್ನು ರಚಿಸಿ ಜನ ಮೆಚ್ಚುಗೆಯನ್ನು ಪಡೆದರು. ಮೀನು, ಹಂದಿ ಮಾನವನ ಹೃದಯ, ಮೆಕ್ಕೆಜೋಳ ಮುಂತಾದವುಗಳ ಜತೆಗೆ ಸಾಮಾಜಿಕ ಕಳಕಳಿಯನ್ನು ಹೊಂದಿರುವ ಕಲಾಕೃತಿಗಳು ಮೆಚ್ಚುಗೆ ಪಡೆದವು.

ಕಬ್ಬನ್ ಉದ್ಯಾನವನ ವಿಶಾಲವಾಗಿದ್ದು, ಯಾವ ಭಾಗದಿಂದ ಪ್ರವೇಶಿಸಿದರೂ ಬಗೆ ಬಗೆಯ ಕಲಾಕೃತಿಗಳು ನಿಮ್ಮನ್ನು ಸ್ವಾಗತಿಸುತ್ತವೆ. ಕಲಾವಿದರಾದ ನಾಗಪ್ಪ ಪ್ರಧಾನಿಯವರು ಹೇಳುವ ಹಾಗೆ, ಕರ್ನಾಟಕದಲ್ಲಿ ಎಷ್ಟೇ ಕಲಾ ಶಿಬಿರಗಳು ನಡೆಸಿದ್ದರೂ ಇದೊಂದು ವಿಭಿನ್ನ ಕಲಾಶಿಬಿರ. ಇನ್ನೊಬ್ಬ ಕಲಾವಿದ ಶಿವಪ್ರಸಾದ್ 'ಈ ಕಲಾಕೃತಿಗಳ ಮೂಲಕ ಸಮಾಜಕ್ಕೆ ಸಂದೇಶ ನೀಡುವ ಕೆಲಸವನ್ನು ಮಾಡಿದ್ದೇವೆ. ಪರಿಸರದ ಜತೆಗೆ ಮನುಷ್ಯನ ಸಂಬಂಧ ಇದರಿಂದ ಉತ್ತಮಗೊಂಡಿದೆ. ಇಲ್ಲಿ ತಾಯಿ ತಂದೆ ಮಗುವಿನ ಬಾಂಧವ್ಯ ಸೃಷ್ಟಿಸುವ ಕಲಾಕೃತಿಗಳಿವೆ. ಎಲ್ಲರೂ ಒಟ್ಟಾಗಿ ಬಾಳಬೇಕು ಎನ್ನುವ ಸಂದೇಶ ನೀಡುವ ಕಲಾಕೃತಿಗಳಿವೆ' ಎನ್ನುತ್ತಾರೆ. ಈ ಕಲಾಕೃತಿಗಳನ್ನು ವೀಕ್ಷಣೆ ಮಾಡಲು ಕಬ್ಬನ್ ಉದ್ಯಾನವನ ಸಾರ್ವಜನಿಕರಿಗೆ ಮುಕ್ತವಾಗಿದೆ. ಶುಲ್ಕವಿಲ್ಲ. ಬೆಂಗಳೂರಿಗೆ ಬಂದಾಗ ಸ್ವಲ್ಪ ಹೊತ್ತು ಕಬ್ಬನ್ ಪಾರ್ಕ್‌ನ ಕಾಷ್ಠಶಿಲ್ಪಗಳ ಜತೆ ಸಮಯ ಕಳೆಯಲು ಮರೆಬೇಡಿ.



■ ಬಳಕೂರು ವಿ.ಎಸ್.ನಾಯಕ್



